## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 148 |
| 2 | ಸದಸ್ಯರ ಹೆಸರು | : | ಶ್ರೀ ಆರ್. ಧರ್ಮಸೇನ |
| 3 | ಉತ್ತರಿಸುವ ದಿನಾಂಕ | : | 10-07-2018 |
| 4 | ಉತ್ತರಿಸುವವರು | : | ಮಾನ್ಯ ಉಪಮುಖ್ಯಮಂತ್ರಿಗಳು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಅನೇಕ ಕಡೆಗಳಲ್ಲಿ ಸುರಂಗ ಮಾರ್ಗಗಳನ್ನು ನಿರ್ಮಿಸಿದ್ದು, ಅದು ಸಾರ್ವಜನಿಕರ ಉಪಯೋಗಕ್ಕೆ ಬಾರದಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರದ ಅನೇಕ ಕಡೆಗಳಲ್ಲಿ ಸುರಂಗ ಮಾರ್ಗಗಳನ್ನು ನಿರ್ಮಿಸಿದ್ದು, ಬಹುತೇಕ ಸುರಂಗ ಮಾರ್ಗಗಳನ್ನು ಸಾರ್ವಜನಿಕರು ಉಪಯೋಗಿಸುತ್ತಿದ್ದು, ಕೆಲವೊಂದು ಸುರಂಗ ಮಾರ್ಗಗಳನ್ನು ಸಾರ್ವಜನಿಕರು ಉಪಯೋಗಿಸದೇ ರಸ್ತೆ ದಾಟಲು ರಸ್ತೆಯನ್ನೆ ಉಪಯೋಗಿಸುತ್ತಿದ್ದು, ಅವುಗಳನ್ನು ಸುಧಾರಿಸಲು/ಮುಚ್ಚಲು ಪರಿಶೀಲಿಸಲಾಗುತ್ತಿದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸುರಂಗ ಮಾರ್ಗಗಳ ವಿವರಗಳು ಈ ಕೆಳಕಂಡಂತಿರುತ್ತವೆ.<br><br><u>ದಕ್ಷಿಣ ವಲಯದಲ್ಲಿ:</u> 1. ವಾರ್ಡ್ ಸಂಖ್ಯೆ 119 – ಕೆ.ಆರ್.ಮಾರುಕಟ್ಟೆ ವೃತ್ತದಲ್ಲಿ ಮತ್ತು 2. ನರಸಿಂಹರಾಜು ರಸ್ತೆಯ ಟೌನ್ ಹಾಲ್ ಮುಂಭಾಗ. ಈ ಎರಡು ಸುರಂಗ ಮಾರ್ಗಗಳನ್ನು ಸಾರ್ವಜನಿಕರಿಗೆ ಉಪಯೋಗಿಸಲು ಅನುವು ಮಾಡಲಾಗಿದೆ.<br><br>3. ವಾರ್ಡ್ ಸಂಖ್ಯೆ 123 ರಲ್ಲಿ – ವಿಜಯನಗರ ಸರ್ವೀಸ್ ರಸ್ತೆಯಿಂದ ಗೋವಿಂದರಾಜ ನಗರ ಸರ್ವೀಸ್ ರಸ್ತೆಗೆ ಹೊಂದಿಕೊಂಡಂತೆ ಒಂದು ಸುರಂಗ ಮಾರ್ಗ ಇರುತ್ತದೆ. ಪ್ರಸ್ತುತ ವಾರ್ಡ್ – 123ರ ವಿಜಯನಗರ ಸರ್ವೀಸ್ ರಸ್ತೆಯಲ್ಲಿ ಸದರಿ ಸುರಂಗ ಮಾರ್ಗವನ್ನು ಹೊಂದಿಕೊಂಡಂತೆ ಹವಾ ನಿಯಂತ್ರಿತ ಮಾರುಕಟ್ಟೆ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಸದರಿ ಸುರಂಗ ಮಾರ್ಗದ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ನಂತರ ಸುರಂಗ ಮಾರ್ಗವನ್ನು ಶುಚಿಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಲಾಗುತ್ತದೆ.<br><br><u>ಪೂರ್ವ ವಲಯದಲ್ಲಿ:</u> 1. ಶೇಷಾದ್ರಿ ರಸ್ತೆಯ ಎಸ್.ಜೆ.ಪಿ ಪಾಲಿಟೆಕ್ನಿಕ್ ಹತ್ತಿರ, 2. ಕೆ.ಆರ್.ಸರ್ಕಲ್ ಬಳಿ, 3. ಡಾ॥ ಅಂಬೇಡ್ಕರ್ ವೀದಿ ರಸ್ತೆಯಲ್ಲಿ, 4. ಕೆ.ಆರ್.ಸರ್ಕಲ್ ಬಳಿ ಕಬ್ಬನ್ ಪಾರ್ಕ್ ಹತ್ತಿರ, 5. ಕೆ.ಆರ್.ಸರ್ಕಲ್ ಬಳಿ ಪೋಸ್ಟ್ ಆಫೀಸ್ ರಸ್ತೆಯಲ್ಲಿ, 6. ಕೆ.ಆರ್. ಸರ್ಕಲ್ ಬಳಿ ನೃಪತುಂಗ |

| | | |
|---|---|---|
| | | ರಸ್ತೆಯಲ್ಲಿ, 7. ನೃಪತುಂಗ ರಸ್ತೆ ಆರ್.ಬಿ.ಐ. ಬಳಿ, 8. ನೃಪತುಂಗ ರಸ್ತೆ ಸೆಂಟ್ ಮಾರ್ಥಾಸ್ ಆಸ್ಪತ್ರೆ ಬಳಿ, 9. ರಾಜಭವನ ರಸ್ತೆಯ ಚಾಲುಕ್ಯ ವೃತ್ತದ ಬಳಿ, 10. ಮಿಲ್ಲರ್ ರಸ್ತೆಯ ಚಾಲುಕ್ಯ ವೃತ್ತದ ಬಳಿ, 11. ಬಳ್ಳಾರಿ ರಸ್ತೆಯ ಹೆಬ್ಬಾಳದ ಬಳಿ ಮತ್ತು 12. ಬಳ್ಳಾರಿ ರಸ್ತೆಯ ಆನಂದನಗರ ಬಳಿ ಪಾದಚಾರಿ ಸುರಂಗ ಮಾರ್ಗಗಳಿದ್ದು, ಈ ಎಲ್ಲಾ ಸುರಂಗ ಮಾರ್ಗಗಳನ್ನು ಸಾರ್ವಜನಿಕರಿಗೆ ಉಪಯೋಗಿಸಲು ಅನುವು ಮಾಡಲಾಗಿದೆ.<br><br>ಪಶ್ಚಿಮ ವಲಯದಲ್ಲಿ: 1. ವಾರ್ಡ್ ಸಂಖ್ಯೆ 77– ಮಲ್ಲೇಶ್ವರಂ ವೃತ್ತದ ಬಳಿ, 2. ವಾರ್ಡ್ ಸಂಖ್ಯೆ 94 ಸಂಗಮ್ ಟಾಕೀಸ್ ಬಳಿ, 3. ವಾರ್ಡ್ ಸಂಖ್ಯೆ 139 ಕೆ.ಆರ್. ಮಾರುಕಟ್ಟೆ ಹತ್ತಿರ ಸುರಂಗ ಮಾರ್ಗಗಳಿದ್ದು, ಈ ಎಲ್ಲಾ ಸುರಂಗ ಮಾರ್ಗಗಳನ್ನು ಸಾರ್ವಜನಿಕರಿಗೆ ಉಪಯೋಗಿಸಲು ಅನುವು ಮಾಡಲಾಗಿದೆ. |
| ಆ) | ಈ ರೀತಿ ಎಷ್ಟು ಸುರಂಗ ಮಾರ್ಗಗಳು ನಿರುಪಯುಕ್ತವಾಗಿವೆ; ಈ ಸ್ಥಿತಿಗೆ ಬರಲು ಕಾರಣವೇನು; ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿರುವ ಅಂಡರ್‌ಪಾಸ್‌ಗಳು ಸಾರ್ವಜನಿಕರ ಉಪಯೋಗಕ್ಕೆ ಬಾರದಂತೆ ಮಾಡಿರುವ ಅಧಿಕಾರಿಗಳ ಮೇಲೆ ಸರ್ಕಾರದ ಯಾವ ಕ್ರಮ ತೆಗೆದುಕೊಂಡಿದೆ; | ಪಾಲಿಕೆ ವ್ಯಾಪ್ತಿಯಲ್ಲಿ ಬರುವ ದಕ್ಷಿಣ ವಲಯಕ್ಕೆ ಸೇರಿರುವ ವಾರ್ಡ್ – 123ರ ವಿಜಯನಗರ ಸರ್ವೀಸ್ ರಸ್ತೆಯಲ್ಲಿ ಬರುವ ಸುರಂಗ ಮಾರ್ಗವನ್ನು ಹೊಂದಿಕೊಂಡಂತೆ ಹವಾನಿಯಂತ್ರಿತ ಮಾರುಕಟ್ಟೆ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಸದರಿ ಸುರಂಗ ಮಾರ್ಗದ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಮತ್ತು 12 ತಿಂಗಳ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗುತ್ತದೆ. |
| ಇ) | ಇವುಗಳನ್ನು ಶುಚಿಗೊಳಿಸಿ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ; ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು? | ಕೆಲವು ಸುರಂಗ ಮಾರ್ಗಗಳು ಸಾರ್ವಜನಿಕರಿಂದ ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಆಗದೆ ಇರುವುದು ಗಮನಕ್ಕೆ ಬಂದಿದೆ. ಅವುಗಳನ್ನು ಸುಧಾರಿಸಲು/ಮುಚ್ಚುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ: ನಅಇ 353 ಎಂಎನ್‌ವೈ 2018**

(ಡಾ॥ ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ